ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರ ಪರಿಶೀಲನೆ ಮಾಡುತ್ತದೆ.

ಳಲಜ (೧೧೧೭) (ಸದಸ್ಯರು ಗೈರುಹಾಜರಿ)

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮೂವತ್ತುನಾಲ್ಕನೇ ಪಟ್ಟಿಯನ್ನು ಸಭೆಯ ಮುಂದಿಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಪ್ರಸಕ್ತ ಬೇಸಿಗೆಯಲ್ಲಿ ಘಟಪ್ರಭಾ ಎಡದಂಡೆ ನಾಲೆಯ ಕೆಳಗೆ ಬೇಸಿಗೆ ಬೆಳೆಗೆ ನೀರೊದಗಿಸುವುದು

೩೫೬ (೧೦೪೬) ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಈಗ ಹಿಡಕಲ್ ಜಲಾಶಯದಲ್ಲಿ ತನ್ನ ಸಾಮರ್ಥ್ಯದಷ್ಟು ನೀರು ಸಂಗ್ರಹಿತವಾಗಿದು ಘಟಪ್ರಭಾ ಎಡದಂಡೆ ಕಾಲುವೆಯ ನೀರಾವರಿ ಯೋಜನೆಯಲ್ಲಿ ಶೇಕಡ ೨೦ ಬೇಸಿಗೆ ಬೆಳೆಗೆ ನೀರು ಕೊಡುವ ಯೋಜನಾ ವರದಿಯಿದ್ದು ಈ ವರ್ಷ ಯೋಜನಾ ಕ್ಷೇತ್ರದಲ್ಲಿ ಬೇಸಿಗೆ ಬೆಳೆಗೆ ನೀರನ್ನೊದಗಿಸಲಾಗುವುದೇ ?

ಆ) ನೀರನ್ನೊದಗಿಸದಿದ್ದಲ್ಲಿ ಕಾರಣಗಳೇನು ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಸಂಗ್ರಹವಾಗಿರುವ ನೀರು ಈಗಾಗಲೇ ನಿಗಧಿ ಪಡಿಸಿದಂತೆ ಹಿಂಗಾರಿ ಬೆಳೆಗಳಿಗೆ ನೀರಾವರಿ ಯನ್ನು ೧೯೪೪ರ ೧೫ನೆಯ ಮಾರ್ಚ್‌ವರೆಗೆ ವಿಸ್ತರಿಸಿದ್ದರಿಂದ, ಅಭಾವ ಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ ಒಪ್ಪಲಾಗಿರುವ ಇತರ ಅಗತ್ಯಗಳಿಗೆ ಸಾಕಾಗುವಷ್ಟು ಮಾತ್ರ ಇದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಸವದತ್ತಿ ತಾಲ್ಲೂಕು ಯರಗಟ್ಟಿ ಏತ ನೀರಾವರಿ ಯೋಜನೆ

೩೫೭ (೧೩೪೭) ಶ್ರೀ ಆರ್. ವಿ. ಪಾಟೀಲ್ (ಸವದತ್ತಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸವದತ್ತಿ ತಾಲ್ಲೂಕು ಯರಗಟ್ಟಿ ನೀರಾವರಿ ಯೋಜನೆಗೆ ಮಂಜೂರಾದ ಹಣವೆಷ್ಟು ?

ಆ) ಖೋಲ್ಡಟ್ಟಿದ ಹಾಗೂ ಕೆಳಮಟ್ಟದ ನಾಲೆಗಳಿಗೆ ವೆಚ್ಚವಾದ ಹಣವೆಷ್ಟು ?

ಇ) ಸದರಿ ಯೋಜನೆಯು ಕಾಮಗಾರಿಯನ್ನು ಎಂದು ಪೂರೈಸಿ ನೀರನ್ನು ಬಿಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೮೬ ಲಕ್ಷ ರೂ. ಗಳು.

ಆ) ಜನವರಿ, ೧೯೮೪ ರವರೆಗೆ ಮೇಲ್ಮಟ್ಟದ ನಾಲೆಗೆ ಆಗಿರುವ ವೆಚ್ಚ

೬೮.೦೯ ಲಕ್ಷ ರೂ. ಗಳು.

ಜನವರಿ, ೧೯೮೪ ರವರೆಗೆ ಕೆಳಮಟ್ಟದ ನಾಲೆಗೆ ಆಗಿರುವ ವೆಚ್ಚ

೨೧.೨೦ ಲಕ್ಷ ರೂ. ಗಳು.

ಇ) ೧೯೮೪-೮೫ ರ ಖಾರಿಫ್‌ನಲ್ಲಿ ೧,೧೦೯ ಹೆಕ್ಟೇರು ನೀರಾವರಿ ಸಾಮರ್ಥ್ಯ ಒದಗಿಸುವ ಕಾರ್ಯಕ್ರಮವಿದೆ. ಯೋಜನೆಯು ಜೂನ್ ೧೯೮೬ರ ವೇಳೆಗೆ ಮುಗಿಯುವ ನಿರೀಕ್ಷೆ ಇದೆ.

ಬಂಟವಾಳ ತಾಲ್ಲೂಕಿನ ಕರ್ಮಾರು ಗುಂಡಿ ಎಂಬಲ್ಲಿ ಏತ ನೀರಾವರಿ ಯೋಜನೆ ಬಗ್ಗೆ

೩೫೮ (೧೨೬೩) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಂಟವಾಳ ತಾಲ್ಲೂಕಿನ ಬಡಗ ಬೆಳ್ಳೂರು ಗ್ರಾಮದಲ್ಲಿ ಗುರುಪುರ ಹೊಳೆಯ ಕರ್ಮಾರು ಗುಂಡಿ ಎಂಬಲ್ಲಿ ಯಾತ ನೀರಾವರಿ ಯೋಜನೆ ಪ್ರಾರಂಭ ಮಾಡುವ ಆಲೋಚನೆ ಸರ್ಕಾರದವರಲ್ಲಿ ದೆಯೇ ?

ಆ) ಹಾಗಿದ್ದಲ್ಲಿ ಅದರ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಒದಗುವ ನೀರಾವರಿ ಸೌಲಭ್ಯಗಳ ಬಗ್ಗೆ

೩೫೯ (೯೧೭) ಶ್ರೀ ಪಿ. ರಾಮಚಂದ್ರರಾವ್ (ಉಳ್ಳಾಲ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆಯ ಮೂಲಕ ರಾಯಚೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ನೀರನ್ನು ಒದಗಿಸಲು ಯೋಚಿಸಲಾಗಿದೆ ?

ಆ) ಈ ಬಲದಂಡೆ ಕಾಲುವೆಯಿಂದ ರಾಯಚೂರು ಜಿಲ್ಲೆಯ ಎಷ್ಟು ಎಕರೆ ಜಮೀನು ನೀರಾವರಿಯಾಗುತ್ತದೆ ?

ಇ) ಬಲದಂಡೆ ಕಾಲುವೆಯ ಕೆಲಸ ಕಾರ್ಯಗಳು ಪ್ರಾರಂಭವಾಗಿದೆಯೇ ?

ಈ) ಹಾಗಿದ್ದಲ್ಲಿ ೧೯೮೪ ರಲ್ಲಿ ಇದಕ್ಕಾಗಿ ಈವರೆವಿಗೆ ಮಾಡಿದ ವೆಚ್ಚವೆಷ್ಟು ?

ಉ) ಹಾಗಿದ್ದಲ್ಲಿ ಕಾರಣವೇನು ?

ಊ) ಸರ್ಕಾರದವರು ಈ ಕಾಲುವೆಯ ಕೆಲಸ ಚುರುಕುಗೊಳಿಸಲು ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಲಿಂಗಸುಗೂರು, ದೇವದುರ್ಗ ಮತ್ತು ರಾಯಚೂರು ತಾಲ್ಲೂಕುಗಳು.

ಆ) ೫,೦೮,೭೦೦ ಎಕರೆಗಳು ಅಥವಾ ೨,೦೫,೯೫೧ ಹೆಕ್ಟೇರುಗಳು.

ಇ) ಇನ್ನೂ ಪ್ರಾರಂಭವಾಗಿಲ್ಲ.

ಈ) (ಇ) ನಲ್ಲಿ ತಿಳಿಸಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.